ಅ.ದಾ. : 31 / 2021
ಪಿ.ಡಬ್ಲೂ: 01

**ದಿನಾಂಕಃ 18-10-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲು** :- ಶ್ರೀ. ಜೆ.ಸಿ.ಕೆ. ವಕೀಲರಿಂದ **ಪ್ರತಿವಾದಿಯ** ಪರವಾಗಿ :-

5. ನೀವು ಮೀನಾಕ್ಷನವರಿಂದ ದಾವ ಸ್ವತ್ತನ್ನು ಖರೀದಿ ಮಾಡುವ ಮುನ್ನ ಸರ್ವೆ ನಂಬರ್-3, ವರ್ತೂರು ನರಸೀಪುರ ಗ್ರಾಮದ ಎಲ್ಲಾ ದಾಖಲಾತಿಗಳನ್ನು ಪರಿಶೀಲನೆ ಮಾಡಿರುತ್ತೀರಾ ಎಂದರೆ ಸಾಕ್ಷಿ ಕಾನೂನು ಸಲಹೆಯನ್ನು ಪಡೆದುಕೊಂಡಿರುತ್ತೇನೆಂದು ನುಡಿಯುತ್ತಾರೆ. ನೀವು ಎಷ್ಟು ವರ್ಷದ ದಾಖಲಾತಿಗಳನ್ನು ಪರಿಶೀಲನೆ ಮಾಡಲು ನಿಮ್ಮ ವಕೀಲರಿಗೆ ನೀಡಿರುತ್ತೀರಿ ಎಂದರೆ ಸಾಕ್ಷಿ 1960 ಇಸವಿಯಿಂದ ಎಲ್ಲಾ ದಾಖಲಾತಿಯನ್ನು ಪರಿಶೀಲನೆ ಮಾಡಲು ನೀಡಿರುತ್ತೇನೆಂದು ನುಡಿಯುತ್ತಾರೆ. ನಿಮಗೆ ಎ.ಜಿ ಓಂಬತ್ತುಕೆರೆ, ಬಲದೇವ್ ಕಿಶನ್ ಲಾಲ್, ಹಿರೆಲಾಲ್ ವಾಹಿ ಮತ್ತು ವಿಪಿಂದರ್ ಸಿಂಗ್ ಸರ್ವೆ ನಂಬರ್-3 ರ ಮಾಲೀಕರು ಎಂದು ಗೊತ್ತಾಗಿರುತ್ತದೆಂದರೆ ಸರಿ. ನಿಪಿ-11 ರಲ್ಲಿ ಎ.ಜಿ ಓಂಬತ್ತುಕೆರೆ, ಬಲದೇವ್ ಕಿಶನ್ ಲಾಲ್, ಹಿರೆಲಾಲ್ ವಾಹಿ ಮತ್ತು ವಿಪಿಂದರ್ ಸಿಂಗ್ ಇವರುಗಳು ಖರೀದಿ ಮಾಡಿದ ಬಗ್ಗೆ ನಮೂದು ಆಗಿದೆ ಎಂದರೆ ಸರಿ. ಎ.ಜಿ ಓಂಬತ್ತುಕೆರೆ, ಬಲದೇವ್ ಕಿಶನ್ ಲಾಲ್, ಹಿರೆಲಾಲ್ ವಾಹಿ ಮತ್ತು ವಿಪಿಂದರ್ ಸಿಂಗ್ ಇವರುಗಳ ಹೆಸರಿಗೆ ಭೂ ಪರಿವರ್ತನೆ ಅವರವರ ಭಾಗಕ್ಕೆ ತಕ್ಕಂತೆ ಮಾಗಡಿ ತಹಶೀಲ್ದಾರ್ ಕಚೇರಿಯಲ್ಲಿ 1979, 1981 ಮತ್ತು 1982 ರಲ್ಲಿ ಭೂ ಪರಿವರ್ತನೆ ಮಾಡಿಸಿಕೊಂಡಿರುತ್ತಾರೆಂದರೆ ಸರಿ.

6. ನೀವು 1986 ರ ನಂತರ ನಮೂನೆ-15 ರ ಇ.ಸಿ. ಯನ್ನು ನೀಡಿಲ್ಲ ಎಂದರೆ ಸರಿ, ಸಾಕ್ಷಿ ಯಾವುದೇ ವಹಿವಾಟು ಆಗಿಲ್ಲ ಎಂದು ನುಡಿಯುತ್ತಾರೆ. ಈ ಮೇಲೆ ಹೇಳಿರುವ 4 ಜನರು ದಿನಾಂಕಃ 12-03-1981, ದಿನಾಂಕಃ 25-03-1981, ದಿನಾಂಕಃ 25-03-1982 ಮತ್ತು ದಿನಾಂಕಃ 02-03-1981 ರಲ್ಲಿ ಪ್ರತಿವಾದಿ ಕಂಪನಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ಆ ರೀತಿ ಮಾರಾಟ ಮಾಡಿರುವ ವಿಚಾರ ನಮೂನೆ-15 ರಲ್ಲಿ ನಮೂದಾಗಿತ್ತು, ಆದರೆ ನೀವು ಬೇಕಂತಲೇ ನಮೂನೆ-15 ನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಆ ರೀತಿ ಮಾರಾಟ ಆದ ನಂತರ ಪ್ರತಿವಾದಿಯವರ ಹೆಸರಿಗೆ ಫಾರಂ ನಂಬರ್-9 ಮತ್ತು 11 ರಲ್ಲಿ ಚೋಳನಾಯಕನಹಳ್ಳಿ ಗ್ರಾಮ ಪಂಚಾಯಿತಿಯವರು ನಮೂದು ಮಾಡಿರುತ್ತಾರೆಂದರೆ ಸರಿಯಲ್ಲ. ನಂತರ ಅವರೇ ಚೋಳನಾಯಕನಹಳ್ಳಿ ಗ್ರಾಮ ಪಂಚಾಯಿತಿ ಕಂದಾಯ ಕಟ್ಟುತ್ತಿದ್ದರು ಎಂದರೆ ಸರಿಯಲ್ಲ. ನಂತರ

ಚೋಳನಾಯಕನಹಳ್ಳಿ ಗ್ರಾಮ ಪಂಚಾಯಿತಿಯವರು ಪ್ರತಿವಾದಿಯ ಹೆಸರಿಗೆ ಇ-ಖಾತೆಯನ್ನು ಮಾಡಿರುತ್ತಾರೆಂದರೆ ಸರಿಯಲ್ಲ.

7. ಪ್ರಸ್ತುತ ಪ್ರತಿವಾದಿಗಳ ಹೆಸರಿಗೆ ಇ-ಖಾತೆ ಇರುತ್ತದೆಂದರೆ ಸರಿಯಲ್ಲ. ಪ್ರತಿವಾದಿಗಳು ಖರೀದಿ ಮಾಡಿದಾಗಿನಿಂದಲೂ ಸಹ ಅವರೇ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. ದಿನಾಂಕಃ 11-11-2021 ಪ್ರತಿವಾದಿಗಳು ಮೆಸಸ್. ಬೆಂಗಳೂರು ಡಿವಿನಿಟಿ ಎಲ್.ಎಲ್.ಬಿ. ರವರಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ಮೆಸಸ್. ಬೆಂಗಳೂರು ಡಿವಿನಿಟಿ ಎಲ್.ಎಲ್.ಬಿ. ಈಗ ಹಾಲಿ ಸ್ವಾಧೀನದಲ್ಲಿದ್ದಾರೆಂದರೆ ಸಾಕ್ಷಿ ಇಲ್ಲ, ನಾವೇ ಸ್ವಾಧೀನದಲ್ಲಿದ್ದೇವೆಂದು ನುಡಿಯುತ್ತಾರೆ. ಅವರ ಹೆಸರಿಗೆ ಚೋಳನಾಯಕನಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಖಾತೆ ಸಹ ಆಗಿರುತ್ತದೆ, ಅವರೇ ಕಂದಾಯವನ್ನು ಸಹ ಕಟ್ಟುತ್ತಿದ್ದಾರೆಂದರೆ ಸರಿಯಲ್ಲ.

8. ಎ.ಜಿ ಓಂಬತ್ತುಕೆರೆ, ಬಲದೇವ್ ಕಿಶನ್ ಲಾಲ್, ಹಿರೆಲಾಲ್ ವಾಹಿ ಮತ್ತು ವಿಪಿಂದರ್ ಸಿಂಗ್ ರವರುಗಳು ರವಿಕುಮಾರ್ ರವರಿಗೆ ಸರ್ವೆ ನಂಬರ್-3 ಕ್ಕೆ ಜಿಪಿಎ ಮಾಡಿಕೊಟ್ಟಿರುತ್ತಾರೆಂದು ನೀವು ಹೇಳಿದ್ದು, ಯಾವ ದಿನಾಂಕದಂದು ಜಿಪಿಎ ಮಾಡಿಕೊಟ್ಟಿರುತ್ತಾರೆಂದರೆ ಸಾಕ್ಷಿ ಸುಮಾರು 1995-96 ರಲ್ಲಿ ಮಾಡಿಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ಸದರಿ ಜಿಪಿಎ ನೊಂದಾಯಿತ ಜಿಪಿಎ ಆಗಿರುತ್ತದೆಯಾ ಅಥವಾ ನೊಟರಿಕೃತ ಜಿಪಿಎ ಆಗಿರುತ್ತದೆಯಾ ಎಂದರೆ ಸಾಕ್ಷಿ ಸರಿಯಾಗಿ ನೆನಪಿಲ್ಲ ಎಂದು ನುಡಿಯುತ್ತಾರೆ. ಸದರಿ ಜಿಪಿಎ ಪ್ರತಿಯನ್ನು ನೀವು ನೋಡಿರುತ್ತೀರಾ ಎಂದರೆ ಸಾಕ್ಷಿ ನೋಡಿರುತ್ತೇನೆಂದು ನುಡಿಯುತ್ತಾರೆ. ಸದರಿ ಜಿಪಿಎ ಪ್ರತಿಯನ್ನು ಕ್ರಯಕ್ಕೆ ಖರೀದಿ ಮಾಡುವ ಮುನ್ನ ನಿಮ್ಮ ವಕೀಲರಿಗೆ ನೀಡಿರುತ್ತೀರಾ ಎಂದರೆ ಸಾಕ್ಷಿ ನೀಡಿರುತ್ತೇನೆಂದು ನುಡಿಯುತ್ತಾರೆ. ಸದರಿ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಎ.ಜಿ ಓಂಬತ್ತುಕೆರೆ, ಬಲದೇವ್ ಕಿಶನ್ ಲಾಲ್, ಹಿರೆಲಾಲ್ ವಾಹಿ ಮತ್ತು ವಿಪಿಂದರ್ ಸಿಂಗ್ ಇವರುಗಳು ಯಾರು ಸಹ ರವಿಕುಮಾರ್ ರವರಿಗೆ ಜಿಪಿಎ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಸದರಿಯವರುಗಳಿಗೆ ಯಾರಿಗೂ ಸಹ ಜಿಪಿಎ ಮಾಡಿಕೊಡಲು ಅರ್ಹತೆ ಇರುವುದಿಲ್ಲ, ಯಾಕೆಂದರೆ ಇವರುಗಳು 1980-81 ರಲ್ಲಿಯೇ ಪ್ರತಿವಾದಿ ಕಂಪನಿಗೆ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ಈ ವಿಚಾರ ನಿಮಗೆ ನೀವು ಕ್ರಯಕ್ಕೆ ಪಡೆಯುವ ಮುಂಚೆಯೇ ಗೊತ್ತಿತ್ತು, ಆದರೂ ಸಹ ಖರೀದಿ ಮಾಡಿರುತ್ತೀರಿ ಎಂದರೆ ಸರಿಯಲ್ಲ.

9. ನಿಮಗೆ ಮೀನಾಕ್ಷಯ್ಯ ಮತ್ತು ಅವರ ತಾಯಿ ಜಯಮ್ಮ ನವರಿಂದ ದಿನಾಂಕಃ 03-11-2016 ರಂದು ಖರೀದಿ ಮಾಡಿರುವ ಕ್ರಯಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ, ಸಾಕ್ಷಿ ಮುಂದುವರೆದು ನನ್ನ ಹತ್ತಿರ ಇರುತ್ತದೆ, ಅವಶ್ಯಕತೆ ಇದ್ದಲ್ಲಿ ಹಾಜರು ಪಡಿಸುತ್ತೇನೆಂದು ನುಡಿಯುತ್ತಾರೆ. 1996 ನೇ ಇಸವಿಯಲ್ಲಿ ಜಿಪಿಎ ಮಾಡುವ ಸಮಯದಲ್ಲಿ ಎ.ಜಿ ಓಂಬತ್ತುಕೆರೆ, ಬಲದೇವ್ ಕಿಶನ್ ಲಾಲ್, ಹಿರೆಲಾಲ್ ವಾಹಿ ಮತ್ತು ವಿಪಿಂದರ್ ಸಿಂಗ್ ಇವರುಗಳ ಹೆಸರಿನಲ್ಲಿ ಖಾತೆ ಇದ್ದ ಬಗ್ಗೆ ದಾಖಲೆ ನೀಡಿಲ್ಲ ಎಂದರೆ ಸರಿ. ನಂತರ ರವಿಕುಮಾರ್ ಜಿಪಿಎ ಮಾಡಿಸಿಕೊಂಡಿದ್ದು, ಅವರ ಹೆಸರಿನಲ್ಲಿದ್ದ ಖಾತೆಯನ್ನು ನ್ಯಾಯಾಲಯಕ್ಕೆ ನೀಡಿರುತ್ತೀರಾ ಎಂದರೆ ಸಾಕ್ಷಿ ಜಿಪಿಎ ಮಾತ್ರ ಆಗಿರುತ್ತದೆ, ಕ್ರಯ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ನಂತರ ಮೀನಾಕ್ಷ್ಯಯ್ಯ ಮತ್ತು ಅವರ ತಾಯಿ ಜಯಮ್ಮನವರ ಹೆಸರಿಗೆ ಖಾತೆ ಇದ್ದ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ನೀಡಿರುತ್ತೀರಾ ಎಂದರೆ ಸಾಕ್ಷಿ ನೀಡಿರುತ್ತೇನೆಂದು ನುಡಿಯುತ್ತಾರೆ.

10. ನಿಪಿ-15 ರಿಂದ ನಿಪಿ-21 ನೀವು ಸೃಷ್ಟಿಸಿರುವ ದಾಖಲಾತಿಗಳು ಎಂದರೆ ಸರಿಯಲ್ಲ. ಈ ಎಲ್ಲಾ ದಾಖಲಾತಿಗಳಿಗೆ ಒಬ್ಬರೇ ಅಧಿಕಾರಿ ಸಹಿ ಮಾಡಿರುತ್ತಾರೆಂದರೆ ಸರಿ. ಅವರ ಹೆಸರು ಹೇಳಲು ಆಗುತ್ತದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಿಪಿ-15 ರಿಂದ ನಿಪಿ-21 ಎಲ್ಲಾ ದಾಖಲಾತಿಗಳಲ್ಲಿ ಬರವಣಿಗೆ ಒಂದೇ ರೀತಿ ಇದೆ ಎಂದರೆ ಸಾಕ್ಷಿ ಸರಿ, ಒಬ್ಬರೇ ಬರೆದು ಸಹಿ ಮಾಡಿರುತ್ತಾರೆಂದು ನುಡಿಯುತ್ತಾರೆ. ನಿಪಿ-15 ರಿಂದ ನಿಪಿ-21 ರೀತಿಯ ದಾಖಲಾತಿಗಳು ಯಾವುದು ಇಲ್ಲ ಎಂದು ಚೋಳನಾಯಕನ ಗ್ರಾಮ ಪಂಚಾಯಿತಿಯವರು ಬರೆದು ಹಿಂಬರಹವನ್ನು ನೀಡಿರುತ್ತಾರೆಂದರೆ ಸರಿಯಲ್ಲ. ನಿಪಿ-15 ರಿಂದ ನಿಪಿ-21 ರ ದಾಖಲಾತಿಗಳನ್ನು ನ್ಯಾಯಾಲಯದಿಂದ ಸಂಬಂಧಪಟ್ಟ ಪ್ರಾಧಿಕಾರದಿಂದ ತರಸಲು ನಿಮ್ಮದೇನೂ ಅಭ್ಯಂತರವಿಲ್ಲ ಎಂದರೆ ಸರಿ. ನೀವು ದಾಖಲಾತಿಯನ್ನು ನೀಡುವ ಮುಂಚೆಯೇ ಪ್ರತಿವಾದಿ ಕಂಪನಿಯ ಹೆಸರಿನಲ್ಲಿ ಖಾತೆ ಇತ್ತು, ನೀವು ಸುಳ್ಳು ದಾಖಲಾತಿಗಳನ್ನು ತಂದು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ.

11. ಮೀನಾಕ್ಷಯ್ಯ ಮತ್ತು ಜಯಮ್ಮನವರು ಸರ್ವೆ ನಂಬರ್-3 ಕ್ಕೆ ಸಂಬಂಧಿಸಿದಂತೆ ಲೇಔಟ್ ಮಾಡಿರುತ್ತಾರೆಂದು ಹೇಳಿರುತ್ತೀರಿ, ಆ ಸಂಬಂಧ ಲೇಔಟ್ ಪ್ಲಾನ್ ನೀಡಿರುತ್ತೀರಾ ಎಂದರೆ ಸಾಕ್ಷಿ ಕೊಟ್ಟಿರುತ್ತೇನೆಂದು ನುಡಿಯುತ್ತಾರೆ. ನೀವು ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ದಾಖಲಾತಿಯಲ್ಲಿ ಲೇಔಟ್ ಪ್ಲಾನ್ ನೀಡಿಲ್ಲ ಎಂದರೆ ಸರಿಯಲ್ಲ. ಯಾವ ಪ್ರಾಧಿಕಾರದಿಂದ ಮೀನಾಕ್ಷಯ್ಯ ಮತ್ತು ಜಯಮ್ಮನವರಿಗೆ ಸರ್ವೆ ನಂ-3 ಕ್ಕೆ ಸಂಬಂಧಿಸಿದಂತೆ ಲೇಔಟ್ ಪ್ಲಾನ್

ನೀಡಿರುತ್ತೀರಾ ಎಂದರೆ ಸಾಕ್ಷಿ ಚೋಳನಾಯಕನಹಳ್ಳಿ ಪಂಚಾಯಿತಿ ಅಧ್ಯಕ್ಷರು ನೀಡಿರುತ್ತಾರೆ, ಸಾಕ್ಷಿ ಮುಂದುವರೆದು ಚೋಳನಾಯಕನಹಳ್ಳಿ ಪಂಚಾಯಿತಿ ಇಂದ ನೀಡಿರುತ್ತಾರೆಂದು ನುಡಿಯುತ್ತಾರೆ. ಆ ರೀತಿ ಚೋಳನಾಯಕನಹಳ್ಳಿ ಪಂಚಾಯಿತಿ ಅಧ್ಯಕ್ಷರಾಗಲೀ ಅಥವಾ ಚೋಳನಾಯಕನಹಳ್ಳಿ ಪಂಚಾಯಿತಿಯಿಂದಾಗಲೀ ಲೇಔಟ್ ಪ್ಲಾನನ್ನು ಮೀನಾಕ್ಷಯ್ಯ ಮತ್ತು ಅವರ ತಾಯಿ ಜಯಮ್ಮನವರಿಗೆ ನೀಡಿಲ್ಲ ಎಂದರೆ ಸರಿಯಲ್ಲ. ಮೀನಾಕ್ಷಯ್ಯ ಮತ್ತು ಜಯಮ್ಮನವರು ಯಾವುದೇ ಲೇಔಟ್ ಸಹ ಮಾಡಿಲ್ಲ ಎಂದರೆ ಸರಿಯಲ್ಲ. ನೀವು ಪ್ರತಿವಾದಿಗಳ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ಮೀನಾಕ್ಷಯ್ಯ ಮತ್ತು ಜಯಮ್ಮನವರೊಂದಿಗೆ ಸೇರಿಕೊಂಡು ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ.

12. ನಿಪಿ-22 ರಿಂದ ನಿಪಿ-25 ರ ಪೋಟೋಗಳು ಸರ್ವೆ ನಂಬರ್-3 ಕ್ಕೆ ಸಂಬಂಧಿಸಿದ ಸ್ವತ್ತು ಅಲ್ಲ ಎಂದರೆ ಸಾಕ್ಷಿ ಸರ್ವೆ ನಂಬರ್-3 ಕ್ಕೆ ಹೋಗುವ ರಸ್ತೆ ಎಂದು ನುಡಿಯುತ್ತಾರೆ. ನಿಪಿ-22 ರಿಂದ ನಿಪಿ-25 ರ ಪೋಟೋಗಳಲ್ಲಿ ಯಾವುದೇ ರಸ್ತೆ ಕಾಣಿಸುತ್ತಿಲ್ಲ ಎಂದರೆ ಸರಿಯಲ್ಲ, ಅಲ್ಲಿ ಗಿಡ ಗಂಟೆಗಳು ಬೆಳೆದುಕೊಂಡಿರುತ್ತದೆಂದು ನುಡಿಯುತ್ತಾರೆ. ಸರ್ವೆ ನಂಬರ್-3 ರ ಜಮೀನಿನ ಪೋಟೋಗಳನ್ನು ನೀಡಿಲ್ಲ ಎಂದರೆ ಸಾಕ್ಷಿ ಸೈಟಿನ ಪೋಟೋಗಳನ್ನು ನೀಡಿರುತ್ತೇನೆಂದು ನುಡಿಯುತ್ತಾರೆ. ಅಂದರೆ ಸರ್ವೆ ನಂಬರ್-3 ರ ಪೋಟೋಗಳನ್ನು ನೀಡಿಲ್ಲ ಎಂದರೆ ಸಾಕ್ಷಿ ಸರ್ವೆ ನಂಬರ್-3 ರ ಸೈಟಿನ ಪೋಟೋವನ್ನು ನೀಡಿರುತ್ತೇನೆಂದು ನುಡಿಯುತ್ತಾರೆ. ನಿಪಿ-22 ರಿಂದ ನಿಪಿ-25 ರ ಪೋಟೋಗಳನ್ನು ಬಿಟ್ಟು ಬೇರೆ ಯಾವುದೇ ಪೋಟೋಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಕೊಟ್ಟಿರುತ್ತೇನೆಂದು ನುಡಿಯುತ್ತಾರೆ.

13. ನೀವು ದಾವ ಸ್ವತ್ತಿನಲ್ಲಿ 5 ಸೈಟುಗಳನ್ನು ಖರೀದಿ ಮಾಡಿದ್ದು, ನೀವು ಆದಾಯ ತೆರಿಗೆ ಪಾವತಿದಾರರ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವು ದಾವ ಸ್ವತ್ತನ್ನು ಖರೀದಿ ಮಾಡಿದ ನಂತರದಲ್ಲಿ ಖಾತೆ ಆಗಿರುತ್ತದೆಯಾ ಎಂದರೆ ಸಾಕ್ಷಿ ಖಾತೆ ಮಾಡಲು ಅರ್ಜಿ ನೀಡಿರುತ್ತೇನೆಂದು ನುಡಿಯುತ್ತಾರೆ. ದಾವ ಸ್ವತ್ತಿಗೆ ಸಂಬಂಧಿಸಿದಂತೆ ನಿಮ್ಮ ಹೆಸರಿನಲ್ಲಿರುವ ಖಾತೆಯನ್ನು ನೀಡಿರುತ್ತೀರಾ ಎಂದರೆ ಸಾಕ್ಷಿ ನೀಡಿರುತ್ತೇನೆಂದು ನುಡಿಯುತ್ತಾರೆ. ದಾವ ಸ್ವತ್ತಿಗೆ ಸಂಬಂಧಿಸಿದಂತೆ ನೀವು ಕಂದಾಯ ಪಾವತಿ ಮಾಡಿರುವ ಬಗ್ಗೆ ಕಂದಾಯ ರಸೀದಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವು ಖಾತೆ ಮಾಡಿಕೊಡಿ ಎಂದು ಪಂಚಾಯಿತಿ ಅರ್ಜಿ ನೀಡಿದ್ದು, ಅದರ ಹಿಂಬರಹವನ್ನು ಪಡೆದು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿ ಸಲ್ಲಿಸಿರುತ್ತೇನೆಂದು

ನುಡಿಯುತ್ತಾರೆ. ಆ ರೀತಿ ಯಾವುದೇ ಹಿಂಬರಹವನ್ನು ನ್ಯಾಯಾಲಯಕ್ಕೆ ನೀಡಿಲ್ಲ ಎಂದರೆ ಸರಿಯಲ್ಲ. ಸದರಿ ಹಿಂಬರಹ ಆಧಾರದ ಮೇರೆಗೆ ನೀವು ನ್ಯಾಯಾಲಯಕ್ಕೆ ದಾವೆಯನ್ನು ಹೂಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ, ಸಾಕ್ಷಿ ಮುಂದುವರೆದು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಬೇರೆ ದಾವೆ ಸಲ್ಲಿಸಿರುತ್ತಾರೆಂದು ನುಡಿಯುತ್ತಾರೆ. ಸದರಿ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಕೇಸು ಬಾಕಿ ಇರುವ ಬಗ್ಗೆ ದಾಖಲಾತಿಯನ್ನು ನೀವು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಹಾಗೂ ಅದರಲ್ಲಿ ನೀವು ಪಕ್ಷಗಾರರಲ್ಲ ಎಂದರೆ ಸರಿ.

14. ಮೀನಾಕ್ಷಯ್ಯ ಮತ್ತು ಜಯಮ್ಮನವರು ಎಂದಿಗೂ ಸಹ ಸರ್ವೆ ನಂಬರ್-3 ರ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಸದರಿಯವರಿಗೆ ಸರ್ವೆ ನಂಬರ್ 3 ರ ಮೇಲೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಅವರುಗಳು ಯಾವುದೇ ಲೇಔಟನ್ನು ಸರ್ವೆ ನಂಬರ್ 3 ರಲ್ಲಿ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಹಾಗೆ ಅವರು ಸರ್ವೆ ನಂಬರ್ 3 ರಲ್ಲಿ ನಿಮಗೆ 5 ಸೈಟುಗಳನ್ನು ಮಾರಾಟ ಮಾಡಲು ಯಾವುದೇ ಹಕ್ಕು ಮತ್ತು ಸ್ವಾಧೀನ ಅವರಿಗೆ ಇರಲಿಲ್ಲ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣಪತ್ರಿಕೆಯ 7ನೆ ಪ್ಯಾರಾದಲ್ಲಿ ದಿಃ 09-02-2021 ರಂದು ಪ್ರತಿವಾದಿ ಕಂಪನಿಯವರಿಗೆ ಸೇರಿರುವ ಸೆಕ್ಯುರಿಟಿ ಗಾರ್ಡ್ ಮತ್ತು ಸೂಪರವೈಸರ್ ಬಂದು ಗಲಾಟೆ ಮಾಡಿರುತ್ತಾರೆಂದು ಬರೆಯಿಸಿರುತ್ತೀರಿ ಎಂದರೆ ಸರಿ. ನೀವು ದಾವ ಸ್ವತ್ತಿನ ಐದು ಸೈಟುಗಳಲ್ಲಿ ಸ್ವಾಧೀನದಲ್ಲಿ ಇಲ್ಲದೇ ಇರುವುದರಿಂದ ಪ್ರತಿವಾದಿ ಕಂಪನಿಯವರು ನಿಮಗೆ ತೊಂದರೆ ಕೊಡುವ ಪ್ರಮೇಯ ಬರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ಕಂಪನಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆಯನ್ನು ಹೂಡಿರುತ್ತೀರಿ ಎಂದರೆ ಸರಿಯಲ್ಲ.

15. ಪ್ರತಿವಾದಿ ಕಂಪನಿಗೆ ಗೊತ್ತಾದ ನಂತರ ಮೀನಾಕ್ಷಯ್ಯ ಮತ್ತು ಜಯಮ್ಮನವರು ಕ್ರಯಪತ್ರವನ್ನು ಸೃಷ್ಟಿ ಮಾಡಿರುತ್ತಾರೆಂದು ಅವರುಗಳ ವಿರುದ್ದ ಪ್ರತಿವಾದಿ ಕಂಪನಿಯವರು ದಾವೆ ಹೂಡಿರುತ್ತಾರೆಂದರೆ ಸಾಕ್ಷಿ ನನಗೆ ಗೂತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ನೀವು ಮೀನಾಕ್ಷಯ್ಯ ಮತ್ತು ಜಯಮ್ಮನವರಿಂದ ತಿಳಿದುಕೊಂಡಿದ್ದರು ಸಹ ಗೊತ್ತಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ. ನೀವು ಸ್ವಾಧೀನದಲ್ಲಿ ಇಲ್ಲದೇ ಇರುವುದರಿಂದ ನೀವು ಪ್ರತಿವಾದಿಗಳ ವಿರುದ್ದ ಹೂಡಿರುವ ದಾವೆ ಊರ್ಜಿತವಲ್ಲ ಎಂದರೆ ಸಾಕ್ಷಿ ನಾವೇ ಸ್ವಾಧೀನದಲ್ಲಿರುತ್ತೇವೆಂದು ನುಡಿಯುತ್ತಾರೆ.

**ಮರು ವಿಚಾರಣೆ : ಇರುವುದಿಲ್ಲ.**

**ಓ.ಹೇ.ಕೇ.ಸ.ಇ.ಎ. ಒಪ್ಪಿರುತ್ತಾರೆ,**

**ಅ.ಸಿ.ಜ. ಮತ್ತು ಜೆ.ಎಂ.ಎಫ್.ಸಿ. ಮಾಗಡಿ.**